(೨) ಉಳ್ಳಾಲ ಕ್ಷೇತ್ರದಲ್ಲಿ ಆಗಾಗ್ಗೆ ವಿದ್ಯುತ್ ನಿಲುಗಡೆಯಾಗುತ್ತಿರುವುದನು ತಪ್ಪಿಸಲು ಒತ್ತಾಯ.

ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಅಧ್ಯಕ್ಷರೇ, ಉಳ್ಳಾಲ ಕ್ಷೇತ್ರದಲ್ಲಿ ಆಗಾಗ ವಿದ್ಯುತ್ ನಿಲುಗಡೆಯಾಗುತ್ತಿರುವುದು ರೂಢಿಯಾಗಿ ಹೋಗಿದೆ. ೨ ಗಂಟೆ ವಿದ್ಯುತ್ ಇದ್ದರೆ ಮತ್ತೆ ಎರಡು ತಾಸು ವಿದ್ಯುತ್ ಇಲ್ಲ. ರಾತ್ರಿ ಸಮಯದಲ್ಲಿ ಇದು ವಾಡಿಕೆಯಾಗಿ ಹೋಗಿದೆ. ಒಮ್ಮೊಮ್ಮೆ ಇಡೀ ರಾತ್ರಿ ವಿದ್ಯುತ್ ಇಲ್ಲವೇ ಇಲ್ಲ. ಇದರಿಂದಾಗಿ ಗ್ರಾಹಕರಿಗೆ ಭಾರೀ ತೊಂದರೆ, ಅಡಚಣೆ ಒದಗಿದೆ.

ಇದಕ್ಕೆ ಕಾರಣ ಕೇಳುವಾಗ ಕೊಣಾಜೆಯಲ್ಲಿ ಒಂದು ಸಬ್ ಸ್ಟೇಷನ್ ಮಾಡಿ ಕೆಲವು ವರ್ಷ ಗಳಾಯಿತು. ಆದರೆ ಅಲ್ಲಿಗೆ ಒಬ್ಬ ಸಿಬ್ಬಂದಿಯನ್ನು ಈವರೆಗೂ ನೇಮಕ ಮಾಡಿಲ್ಲ. ಪ್ರತಿ ವರ್ಷ ಕೇಳುತ್ತಾ ಬಂದರೂ ಸಿಬ್ಬಂದಿಯ ನೇಮಕ ಮಾಡಿರುವುದಿಲ್ಲ. ಇದರಿಂದಾಗಿ ೧೦ ಕಿಲೋ ಮೀಟರ್ ದೂರದ ವಿದ್ಯುತ್ ಕಛೇರಿಯಿಂದಲೇ ಸಿಬ್ಬಂದಿ ಹೋಗಬೇಕು ರಾತ್ರಿ ಹೊತ್ತು ಯಾರೂ ಹೋಗುವುದಿಲ್ಲ. ವಿದ್ಯುತ್ ಕಚೇರಿಗೆ ವಾಹನ ಕೂಡ ಇಲ್ಲ. ಈ ವಿಪತ್ತನ್ನು ಗ್ರಾಹಕರು ಸಹಿಸಿ ಸಹಿಸಿ ಬೇಜಾರಾಗಿರುತ್ತಾರೆ.

ಆದ ಕಾರಣ ಗ್ರಾಹಕರ ಕಷ್ಟ ತಪ್ಪಿಸುತ್ತೀರಾ ?

ಆದಷ್ಟು ಶೀಘ್ರ ಸಿಬ್ಬಂದಿಯನ್ನು ನೇಮಕ ಮಾಡುತ್ತೀರಾ ?

ವಿದ್ಯುತ್ ಕಣ್ಣುಮುಚ್ಚಾಲೆಯಾಟ ನಿಲ್ಲಿಸುತ್ತೀರಾ ?

ಈ ಕಾರ್ಯ ಪ್ರಾಮುಖ್ಯವೆಂದು ಆಗ್ರಹಿಸುತ್ತೇನೆ.

ವಿದ್ಯುತ್ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್.ಯುಂ. ಯಾಹ್ಯಾ.—ಉತ್ತರಗಳನ್ನು ಕೊಡಲಾಗಿದೆ.

ಶ್ರೀ ಕೆ. ಕುಶಾಲ.—ಉತ್ತರವನ್ನು ಕೊಟ್ಟಿಲ್ಲ.

ಅಧ್ಯಕ್ಷರು.—ನಿಯಮ ೩೩ರಲ್ಲಿ ಇದಕ್ಕಿಂತ ಇನ್ನೇನು ಎಕ್ಸ್‌ಪೆಕ್ಟ್ ಮಾಡುತ್ತೀರಿ.

ಶ್ರೀ ವಾಟಾಳ್ ನಾಗರಾಜ್.— ಮಾನ್ಯ ಅಧ್ಯಕ್ಷರೆ, ಇದನ್ನು ರದ್ದು ಮಾಡತಕ್ಕಂಥಾದ್ದು ಒಳ್ಳೆಯದೇನೋ ಎಂದು ನನಗೆನಿಸುತ್ತದೆ.

ಅಧ್ಯಕ್ಷರು.—ಮಾಡಿಬಿಡೋಣ.

ಶ್ರೀ ವಾಟಾಳ್ ನಾಗರಾಜ್.—ಮಾಡುವುದು ಒಳ್ಳೆಯದು. ಏಕೆಂದರೆ, ಸಮ್ಮನೆ ಕಾಲವ್ಯಯ ವಾಗುತ್ತದೆ. ಇದರ ಬದಲು ದಯವಾಮಾಡಿ ಇನ್ನೊಂದೆರಡು ಗಮನ ಸೆಳೆಯುವ ಸೂಚನೆಗಳನ್ನು ಹಾಕಿಕೊಂಡರೆ ಅನುಕೂಲವಾಗುತ್ತದೆ. ದಯವಾಮಾಡಿ ಇದನ್ನು ತಾವು ಪರಿಶೀಲನೆ ಮಾಡಬೇಕು.

ಅಧ್ಯಕ್ಷರು.—ಪರಿಶೀಲನೆ ಮಾಡುತ್ತೇನೆ.

ಶ್ರೀ ಎಸ್.ಎಂ. ಯಾಹ್ಯಾ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಖಾತೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ,

ಮಂಗಳೂರು ತಾಲ್ಲೂಕಿನ ಉಲ್ಲಾಳ ಪ್ರದೇಶವು, ಈಗ ಕೊಣಾಜೆಯಲ್ಲಿ ಸ್ಥಾಪಿಸಿರುವ ಸಿಬ್ಬಂದಿ ರಹಿತ ೧೩೩ ಕೆ.ವಿ.ಎ. ಸಬ್—ಸ್ಟೇಷನ್ನಿನಿಂದ ವಿದ್ಯುತ್ ಸರಬರಾಜು ಪಡೆಯುತ್ತಿದೆ, ಈ ವಿತರಣಾ ಕೇಂದ್ರವು ಸಿಬ್ಬಂದಿ ರಹಿತವಾಗಿರುವುದರಿಂದ, ರಾತ್ರಿ ವೇಳೆಯಲ್ಲಿ ವಿದ್ಯುತ್ ಲೈನ್ ದೋಷದಿಂದ ವಿದ್ಯುತ್ ನಿಲುಗಡೆ ಆದಲ್ಲಿ, ಅದನ್ನು ಸರಿಪಡಿಸಲು ಉಲ್ಲಾಳದಲ್ಲಿರುವ ಶಾಖಾಧಿಕಾರಿಯವರು ಕೊಣಾಜೆಗೆ ಬಂದು ವ್ಯವಸ್ಥೆ ಮಾಡಬೇಕಾಗುತ್ತದೆ. ಆದ್ದರಿಂದ, ವಿದ್ಯುತ್ ಸರಬರಾಜನ್ನು ಪೂರ್ವ ಸ್ಥಿತಿಗೆ ತರಲು ವಿಳಂಬವಾಗುತ್ತಿದೆ.

ಇದೇ ರೀತಿಯ ಸಿಬ್ಬಂದಿ ರಹಿತ ವಿತರಣಾ ಕೇಂದ್ರಗಳು, ರಾಜ್ಯದ ಇನ್ನೂ ಅನೇಕ ಸ್ಥಳಗಳಲ್ಲಿವೆ. ಮಂಡಳಿಯ ಸದ್ಯದ ಆರ್ಥಿಕ ಮುಗ್ಗಟ್ಟಿನಿಂದ ಈ ವಿತರಣಾ ಕೇಂದ್ರಗಳನ್ನು, ಎಲ್ಲಾ ಕಾಲಗಳಲ್ಲೂ ನೋಡಿಕೊಳ್ಳಲು ಸಿಬ್ಬಂದಿ ನೇಮಕಾತಿಯನ್ನು ಮಾಡಲಾಗಿಲ್ಲ, ಮಂಡಳಿಯ ಆರ್ಥಿಕ ಪರಿಸ್ಥಿತಿ ಅನುಸರಿಸಿ ಹಂತ ಹಂತವಾಗಿ ಈ ಸಿಬ್ಬಂದಿ ರಹಿತ ವಿತರಣಾ ಕೇಂದ್ರಗಳಿಗೆ ಸಿಬ್ಬಂದಿ ನೇಮಕ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು. ಕೊಣಾಜೆ ವಿತರಣಾ ಕೇಂದ್ರಕ್ಕೂ ಸಿಬ್ಬಂದಿಯನ್ನು ನೇಮಕ ಮಾಡಲಾಗುವುದು.

ಈ ಮಧ್ಯೆ ವಿದ್ಯುತ್ ಲೈನ್ ದೋಷದಿಂದ ಆಗುವ ಅಡಚಣೆಯನ್ನು ಕಡಿಮೆ ಮಾಡಲು ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

ಇತ್ತೀಚೆಗೆ ನಡೆದ ಸಾಮೂಹಿಕ ವರ್ಗಾವಣೆಯಲ್ಲಿ ನೌಕರರನ್ನು ಮನಬಂದಂತೆ ವರ್ಗಾಯಿಸಿರುವುದನ್ನು ಪರಿಶೀಲಿಸಿ ಅನ್ಯಾಯವಾದವರಿಗೆ ವಿವರಗಳನ್ನು ತರಿಸಿ ವರ್ಗಾವಣೆಗಳನ್ನು ಪುನರ್‌ಪರಿಶೀಲಿಸಲು ಒತ್ತಾಯ.

ಶ್ರೀ ಪೆರಿಕಾಲ್ ಎಂ ಮಲ್ಲಪ್ಪ (ಚಿಕ್ಕಪೇಟೆ) — ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುವುದೆಂದರೆ, ಈಚೆಗೆ ನಡೆದ ಸಾಮೂಹಿಕ ವರ್ಗಾವಣೆಯಲ್ಲಿ ಸರ್ಕಾರಿ ನೌಕರಿಯಲ್ಲಿರುವ ಗಂಡ ಹೆಂಡತಿಯರನ್ನು ಬೇಕೆಂದೇ ಬಹಳ ದೂರ ದೂರದ ಸ್ಥಳಗಳಿಗೆ ವರ್ಗಾಯಿಸಲಾಗಿದೆ. ಸಾಧ್ಯವಾದಷ್ಟು ಅದೇ ಸ್ಥಳ ಅಥವಾ ಹತ್ತಿರದ ಸ್ಥಳಕ್ಕೆ ವರ್ಗಾವಣೆ ಮಾಡಬೇಕೆಂದಿದ್ದರೂ ಅದನ್ನು ನಿರ್ಲಕ್ಷಿಸಿ, ತೊಂದರೆ ಕೊಡುವ ಉದ್ದೇಶದಿಂದ ಈ ರೀತಿ ಮಾಡಲಾಗಿದೆ. ಇದರ ಹಿನ್ನೆಲೆಯನ್ನು ತನಿಖೆ ಮಾಡಬೇಕು ಹಾಗೂ ಈ ರೀತಿ ಅನ್ಯಾಯವಾಗಿರುವ ಪ್ರಕರಣಗಳ ಫೈಲ್‌ಗಳನ್ನು ತರಿಸಿಕೊಂಡು ಅನ್ಯಾಯವನ್ನು ಸರಿಪಡಿಸಿ ಅವರನ್ನು ಒಂದೇ ಸ್ಥಳಕ್ಕೆ ಅಥವಾ ಅದಷ್ಟೂ ಹತ್ತಿರದ ಸ್ಥಳಕ್ಕೆ ವರ್ಗಾಯಿಸಲು ಆದೇಶ ನೀಡಬೇಕು.

ಇನ್ನು ನಿವೃತ್ತಿ ೨–೩ ವರ್ಷ ಇದೆ ಎನ್ನುವವರನ್ನು ಬೇಕೆಂದೇ ದೂರದ ಸ್ಥಳಗಳಿಗೆ ವರ್ಗಾವಣೆ ಮಾಡಲಾಗಿದೆ. ಇಂತಹ ಪ್ರಕರಣಗಳ ಬಗ್ಗೆ ವಿವರಗಳನ್ನು ತರಿಸಿ ಅನ್ಯಾಯವನ್ನು ಸರಿಪಡಿಸಬೇಕು.

ಇನ್ನು ಅವಿವಾಹಿತ ಹೆಣ್ಣು ಮಕ್ಕಳನ್ನು ಅದರಲ್ಲೂ ಮುಖ್ಯವಾಗಿ ಪ್ರಾಥಮಿಕ ಶಾಲಾ ಉಪಾಧ್ಯಾಯನಿಯಾಗಿರುವವರನ್ನು ಅವರಿಗೆ ಯಾವುದೇ ಶಿಫಾರಸು ಪ್ರಭಾವ ಇಲ್ಲ ಎಂದು ರಸ್ತೆ ಸೌಕರ್ಯ ಇಲ್ಲದ ಬಸ್ ಸೌಕರ್ಯ ಇಲ್ಲದ ಹಳ್ಳಿಗಳಿಗೆ ಹಾಕಿ, ಪುರುಷರನ್ನು ಹೋಬಳಿ ತಾಲೂಕು ಕೇಂದ್ರ ದೊಡ್ಡ ದೊಡ್ಡ ಹಳ್ಳಿಗಳಿಗೆ ಹಾಕಲಾಗಿದೆ. ಇಂತಹ ಅನ್ಯಾಯದ ಪ್ರಕರಣಗಳನ್ನು ವಿವರ ತರಿಸಿ ಪರಿಶೀಲಿಸಿ ಸರಿಪಡಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ (ಯೋಜನೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಖಾತೆಗಳ ಸಚಿವರು). — ಮಾನ್ಯ ಅಧ್ಯಕ್ಷರೆ, ಸರ್ಕಾರಿ ನೌಕರರ ವರ್ಗಾವಣೆಗೆ ಸಂಬಂಧಿಸಿದಂತೆ ಸರ್ಕಾರವು ವರ್ಗಾವಣೆ ನೀತಿಯನ್ನು ಅಧಿಕೃತ ಜ್ಞಾಪನ ಸಂಖ್ಯೆ ಡಿಪಿಎಆರ್ ೨ ಎಸ್‌ಟಿಆರ್ ೯೦, ದಿನಾಂಕ ೨೯-೦೫-೯೦ರಲ್ಲಿ ಹೊರಡಿಸಿದ್ದು, ಅದನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿ ಅದರಂತೆಯೇ ಎಲ್ಲಾ ವರ್ಗಾವಣೆಗಳನ್ನು ಮಾಡುವಂತೆ ಹೇಳಲಾಗಿದೆ. (ಪ್ರತಿ ಲಗತ್ತಿಸಿದೆ). ಈ ಅಧಿಕೃತ ಜ್ಞಾಪನದನ್ವಯ ಪತಿ ಪತ್ನಿಯರಿಬ್ಬರೂ ರಾಜ್ಯ ಸರ್ಕಾರಿ ನೌಕರರಾಗಿದ್ದಲ್ಲಿ ಸಾಮಾನ್ಯ ವರ್ಗಾವಣೆಯ ಕಾಲದಲ್ಲಿ ಅವರನ್ನು ಒಂದೇ ಸ್ಥಳಕ್ಕೆ ಅಥವಾ ಹತ್ತಿರದ ಸ್ಥಳಗಳಿಗೆ ವರ್ಗಾವಣೆ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕಾಗಿ ಹೇಳಲಾಗಿದೆ. ಸರ್ಕಾರಿ ನೌಕರಿಯಲ್ಲಿರುವ ಗಂಡ ಹೆಂಡತಿಯನ್ನು ಬಹಳ ದೂರ ದೂರದ ಸ್ಥಳಗಳಿಗೆ ವರ್ಗಾಯಿಸಿದ ಯಾವುದೇ ಪ್ರಕರಣಗಳು ಈವರೆಗೆ ಸರ್ಕಾರದ ಗಮನಕ್ಕೆ ಬಂದಿಲ್ಲ. ಅಂತಹ ನಿರ್ದಿಷ್ಟ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಲ್ಲಿ ಅದನ್ನು ಪರಿಶೀಲಿಸಲಾಗುವುದು.

೨. ನಿವೃತ್ತಿಗೆ ಮೂರು ವರ್ಷದೊಳಗಿನ ಸೇವೆಯನ್ನು ಹೊಂದಿರುವ ಸರ್ಕಾರಿ ನೌಕರರನ್ನು ಅವರು ಆದ್ಯತೆ ತೋರಿಸಿದ ಸ್ಥಳಗಳಿಗೇ ವರ್ಗಾಯಿಸುವಂತೆ ಅಧಿಕೃತ ಜ್ಞಾಪನದಲ್ಲಿ ಹೇಳಲಾಗಿದ್ದು, ಅಂತಹವರನ್ನು ದೂರದ ಸ್ಥಳಗಳಿಗೆ ಅವರ ಕೋರಿಕೆಗೆ ವಿರುದ್ಧವಾಗಿ ವರ್ಗಾವಣೆ ಮಾಡಿರುವಂಥ ನಿರ್ದಿಷ್ಟ ಪ್ರಕರಣಗಳೇನಾದರೂ ಸರ್ಕಾರದ ಗಮನಕ್ಕೆ ಬಂದಲ್ಲಿ ಆ ಬಗ್ಗೆ ಪರಿಶೀಲಿಸಲಾಗುವುದು.

೩. ಸರ್ಕಾರಿ ನೌಕರರಿಗೆ ಸಂಬಂಧಿಸಿದಂತೆ ಹೊರಡಿಸಲಾಗಿರುವ ನೀತಿಯು ಪುರುಷ ಹಾಗೂ ಮಹಿಳಾ ನೌಕರರಿಗೆ ಸಮಾನವಾಗಿ ಅನ್ವಯವಾಗುವುದು. ಇದರಲ್ಲಿ ತಾರತಮ್ಯ ತೋರಿಸುವ ಅಗತ್ಯತೆ ಕಂಡು ಬರುವುದಿಲ್ಲ.

೪. ಈ ರೀತಿ ವರ್ಗಾವಣೆಗಳನ್ನು ಉದ್ದೇಶ ಪೂರ್ವಕವಾಗಿ ಮಾಡಿದ್ದ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಲ್ಲಿ ಅಂತಹ ಪ್ರಕರಣಗಳನ್ನು ಪರಿಶೀಲಿಸಲಾಗುವುದು.